ಶ್ರೀ ಸುಬ್ಬಾರೆಡ್ಡಿ. ಎಸ್.ಎನ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಕಾರ್ಯಕ್ರಮಗಳು ಬಹಳಷ್ಟು ಇದೆ. ಆದರೆ, ಯಾವುದನ್ನೂ ಅನುಷ್ಠಾನಗೊಳಿಸುತ್ತಿಲ್ಲ. ಆದ್ದರಿಂದ, ನನ್ನ ಬೇಡಿಕೆ ಏನೆಂದರೆ, ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆ ಕ್ಷೇತ್ರದ ಶಾಸಕರ ಸಮಿತಿ ರಚನೆ ಮಾಡಿ, ಇಬ್ಬರು ಶಾಸಕರನ್ನು ಆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿ, ಅದರ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಚಿಂಚನಸೂರ: ಮಾನ್ಯ ಅಧ್ಯಕ್ಷರೆ, ಸುಮಾರು ಎರಡು ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಿಲ್ಲಾ ವಲಯ, ರಾಜ್ಯ ವಲಯ ಹಾಗೂ ಕೇಂದ್ರ ವಲಯಗಳಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷರು : ಅವರ ಪ್ರಶ್ನೆ ಸೀಮಿತವಾಗಿದೆ. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ, ಆ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಿ ಎಂದು ಕೇಳುತ್ತಿದ್ದಾರೆ. ಸಮತಿ ರಚನೆ ಮಾಡುವ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಎಂದು ಹೇಳಿದರೆ ಆಯಿತು.

ಶ್ರೀ ಬಾಬುರಾವ್ ಚಿಂಚನಸೂರ : ಈ ಬಗ್ಗೆ ಪರಿಶೀಲಿಸಿ ಅವರೊಂದಿಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಮೀಸಲು ಅರಣ್ಯ ಪ್ರದೇಶ

14 (110) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಮೀಸಲು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :–

(ಅ) ಪುನರ್ ರಚಿತ ತಜ್ಞರ ಸಮಿತಿ–1 ನೀಡಿರುವ ವರದಿಯ ಪ್ರಕಾರ ರಾಜ್ಯದಲ್ಲಿರುವ ವಿವಿಧ ವರ್ಗಗಳ ಅರಣ್ಯ ಪ್ರದೇಶದ ವಿಸ್ತೀರ್ಣ 43,356.47 ಚ.ಕಿ.ಮೀ ಆಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ ;

(ಆ) ಪ್ರಸ್ತುತ ರಾಜ್ಯದಲ್ಲಿ 1,10,626 ಪ್ರಕರಣಗಳಲ್ಲಿ 2,04,442 ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿರುತ್ತದೆ, ಒತ್ತುವರಿಯಾಗಿರುವ ಅರಣ್ಯ ಪ್ರದೇಶದ ವಿಭಾಗಾವಾರು ಮಾಹಿತಿಯನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ–1

(ಪುನರ್ ರಚಿತ ತಜ್ಞ ಸಮಿತಿ–1 ರ ವರದಿಯ ಮೇರೆಗೆ)

(ವಿಸ್ತೀರ್ಣ ಚ.ಕಿ.ಮೀ.ಗಳಲ್ಲಿ)

ಕ್ರ. ಸಂ. Sl.	ಜಿಲ್ಲೆ	ಮೀಸಲು ಅರಣ್ಯ	ರಕ್ಷಿತ ಅರಣ್ಯ	ವರ್ಗೀಕರಿಸದ ಅರಣ್ಯ	ಗ್ರಾಮಾಂತರ ಅರಣ್ಯ	ಖಾಸಗಿ ಅರಣ್ಯ	ಮೊತ್ತ
1	ಬೆಂಗಳೂರು–(ನ)	24.92	2.74	94.59	-	-	122.25
2	ಬೆಂಗಳೂರು–(ಗ್ರಾ)	980.51	87.86	96.48	-	-	1164.85
3	ರಾಮನಗರ						
4	ಬೆಳಗಾಂ	1890.97	12.03	157.87	2.33	-	2063.20
5	ಬಳ್ಳಾರಿ	947.80	325.54	105.18	-	-	1378.52
6	ಬೀದರ್	54.67	124.91	274.98	-	1.60	456.16
7	ಬಿಜಾಪುರ	17.22	0.29	63.60	-	-	81.11
8	ಬಾಗಲಕೋಟೆ	790.69	-	48.24	-	-	838.93
9	ಚಿಕ್ಕಮಗಳೂರು	1312.10	352.38	1083.17	8.86	-	2756.51
10	ಚಿತ್ರದುರ್ಗ	765.11	74.66	447.41	-	-	1287.18
11	ದಾವಣಗೆರೆ	467.33	21.25	55.76			544.34
12	ದಕ್ಷಿಣ ಕನ್ನಡ	1311.74	0.15	647.82	-	52.47	2012.18
13	ಉಡುಪಿ	951.34	16.87	752.36			1720.57
14	ಧಾರವಾಡ	449.10	3.20	16.24	-	-	468.54
15	ಗದಗ್	320.93	3.56	8.88			333.37
16	ಹಾವೇರಿ	346.31	9.88	76.61			432.80
17	ಗುಲ್ಬರ್ಗಾ	273.07	226.69	498.00	-	-	997.76
18	ಯಾದಗಿರಿ						
19	ಹಾಸನ	413.97	88.45	376.14	0.69	-	879.25
20	ಕೊಡಗು	1366.94	105.45	1398.60	-	-	2870.99
21	ಕೋಲಾರ	832.79	87.63	142.68	3.12	-	1066.22
22	ಚಿಕ್ಕಬಳ್ಳಾಪುರ						
23	ಮಂಡ್ಯ	198.61	22.67	443.33	-	-	664.61
24	ಮೈಸೂರು	1208.75	23.31	217.81	-	-	1449.87
25	ಚಾಮರಾಜನಗರ	2698.47	71.10	21.89			2791.46
26	ರಾಯಚೂರು	186.30	41.75	97.52	-	-	325.57
27	ಕೊಪ್ಪಳ	151.71	55.54	223.41			430.66
28	ಶಿವಮೊಗ್ಗ	3218.71	1109.69	2295.60	7.44	-	6631.44
29	ತುಮಕೂರು	780.60	130.34	380.30	0.43	-	1291.67
30	ಉತ್ತರ ಕನ್ನಡ	7727.710	542.130	0.440	26.180	-	8296.460
	ಒಟ್ಟು	29688.37	3540.07	10024.91	49.05	54.07	43356.47

ಅನುಬಂಧ–2

Category-wise details of Forest Encroachments in the State as on 31-3-2014.

Sl. No.	Name of the Circle	Name of the Division	No. of Cases	Area (Area in acres)
1	**Belgaum**	Belgaum	898	2809.00
		Bagalkore	1585	1549.00
		Gokak	39	47.04
	Total		**2522**	**4405.04**
2	**Shimoga**	Shimoga	12714	12668.20
		Bhadravathi	8411	20134.13
		Sagar	27372	44300.28
		Shimoga WL	1675	4399.04
	Total		**50172**	**81501.65**
3	**Canara**	Sirsi	9688	10576.02
		Honnavara	6427	6001.21
		Haliyal	1358	1425.18
		Dandeli TR.	591	238.35
		Yellapura	3755	9357.27
		Karwar	1354	747.13
	Total		**23173**	**28345.16**
4	**Bellary**	Bellary	37	84.88
		Koppal	19	250.11
		Davangere	144	403.99
		Chitradurga	30	76.16
	Total		**230**	**815.14**
5	**Mangalore**	Mangalore	2556	3981.17
		Kundapura	1153	1518.82
		Kudremukh WL	161	362.61
	Total		**3870**	**5862.60**
6	**Chickmagalur**	Chickmagalur	1412	7893.02
		Koppa	6891	22640.17
		Bhadra TR	28	108.29
	Total		**8331**	**30641.48**
7	**Mysore**	Mysore	708	1567.35
		Hunsur	351	951.85
		Mandya	577	2551.75
	Total		**1636**	**5070.95**

Sl. No.	Name of the Circle	Name of the Division	No. of Cases	Area (Area in acres)
8	Chamarajanagar	BRT TR	14	35.00
		Kaveri WL	2069	3652.95
		MM Hills	135	836.14
	Total		**2218**	**4524.09**
9	**Hassan**	Hassan	795	1127.37
		Tumkur	604	1568.37
	Total		**1399**	**2695.74**
10	**Dharwad**	Dharwad	310	314.36
		Haveri	1772	3071.28
		Gadag	1127	5173.08
	Total		**3209**	**8558.72**
11	**Gulbarga**	Gulbarga	485	1419.12
		Raichur	529	2609.12
		Bidar	907	3274.00
		Yadgir	905	2282.29
	Total		**2826**	**9584.53**
12	**Bangalore**	Bangalore (U)	412	1242.38
		Bangalore (R)	744	864.00
		Kolar	1167	3634.03
		Chickballapura	644	1843.19
		Ramnagara	3592	5277.27
		BNP	749	2185.90
	Total		**7308**	**15046.77**
13	**Kodagu**	Madikeri	3382	5760.91
		Virajpet	324	1542.23
		Madikeri WL	22	55.75
	Total		**3728**	**7358.89**
14	FDPT, Mysore	RGNP, Hunsur	4	28.00
	Total		**4**	**28.00**
	Grand Total		**110626**	**204442.16**

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿರುವವರಿಗೆ ಪ್ರಶ್ನೆ ಅರ್ಥವಾಗಿದೆಯೋ, ಇಲ್ಲವೋ ಗೊತ್ತಿಲ್ಲ. ಪ್ರಶ್ನೆ ಇರುವುದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ? ಎಂದು ಕೇಳಿದ್ದೇನೆ. ಅವರು 43, 356.47 ಚ.ಕಿ.ಮೀ ಇದೆ ಎಂದು ಹೇಳಿದ್ದಾರೆ. ಆದರೆ, ಮೀಸಲು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಎಂದು ಕೇಳಿದರೆ 2.04.442 ಎಕರೆ ಎಂದು ಹೇಳಿದ್ದಾರೆ. 43 ಸಾವಿರ ಚ.ಕಿ.ಮೀ ಮೀಸಲು ಅರಣ್ಯವಿದ್ದರೆ 2.04.442 ಲಕ್ಷ ಎಕರೆಯನ್ನು ಹೇಗೆ ಒತ್ತುವರಿ ಮಾಡಿಕೊಳ್ಳಲಾಗುತ್ತದೆ ? ನೀವು ಉತ್ತರ ಕೊಡುವಾಗ ಯಾವುದಾದರೂ ಒಂದು ಯೂನಿಟ್ ನಲ್ಲಿ ಉತ್ತರ ಕೊಡಬೇಕಲ್ಲವೇ? ಮೀಟರ್‌ನಲ್ಲಿ ಕೊಡಿ, ಇಲ್ಲವೆ ಚದರ ಕಿ.ಮೀ ನಲ್ಲಿ ಕೊಡಿ.

ಅಧ್ಯಕ್ಷರು : ಆಯಿತು, Correct ಮಾಡಿ, ಇನ್ನೊಂದು ಸಾರಿ ಉತ್ತರವನ್ನು ಕೊಡಿ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಒಟ್ಟಾರೆ ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ಚದರ ಕಿ.ಮೀ. ನಲ್ಲಿ ಕೊಟ್ಟಿದ್ದೇವೆ. ಅದರಲ್ಲಿ ಒತ್ತುವರಿ ಎಂದು ಬಂದಾಗ ಚದರ ಕಿ.ಮೀ. ಗಿಂತ ಎಕರೆ ಪ್ರಕಾರ ಇಷ್ಟು ಒತ್ತುವರಿ ಆಗಿದೆ ಎಂದು ಉತ್ತರ ಕೊಟ್ಟಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಸಚಿವರೆ, ನಾನು ಕೇಳುವ ಪ್ರಶ್ನೆಯನ್ನು ದಯಮಾಡಿ ನೀವು ಅರ್ಥ ಮಾಡಿಕೊಳ್ಳಿ. ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ಎಂದು ಕೇಳಿದ್ದೇನೆ. ಎಷ್ಟನ್ನು ಯಾರಾದರೂ ಒತ್ತುವರಿ ಮಾಡಿದ್ದಾರೆಯೆ ಎಂದು ಕೇಳಿದ್ದೇನೆ. ಒತ್ತುವರಿ ಮಾಡಿರುವುದನ್ನು ಜಿಲ್ಲಾವಾರು ಮಾಹಿತಿ ಕೊಟ್ಟಿದ್ದೀರಿ, ಆದರೆ, ನೀವು ಕೊಟ್ಟಿರುವ ಮಾಹಿತಿ ತಪ್ಪು ಇದೆಯಲ್ಲ? ಹೇಗೆಂದರೆ 43.356.47 ಚದರ ಕಿ.ಮೀ. ಮೀಸಲು ಅರಣ್ಯ ಪ್ರದೇಶ ಇದೆ ಎಂದು ಉತ್ತರ ಕೊಟ್ಟಿದ್ದೀರಿ. ಮತ್ತೆ ಇನ್ನೊಂದಕ್ಕೆ ಉತ್ತರ ಕೊಡುವಾಗ 2 ಲಕ್ಷ ....

ಅಧ್ಯಕ್ಷರು : ನಿಮಗೆ ಏನು ಮಾಹಿತಿ ಬೇಕು ಎಂಬುದನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮ ಸಮಸ್ಯೆ, ನೀವು ಕೊಟ್ಟಿರುವ ಉತ್ತರದಲ್ಲಿ ವ್ಯತ್ಯಾಸ ಇದೆ ಎನ್ನುವುದು ಒಂದು. ನೀವು ಚದುರ ಕಿ.ಮೀ. ನಲ್ಲಿ ಕೊಟ್ಟಿದ್ದೀರೋ, ಎಕರೆಯಲ್ಲಿ ಕೊಟ್ಟಿದ್ದೀರೋ ಎಂದು ನಾವು ಹೇಗೆ ತಿಳಿದುಕೊಳ್ಳಬೇಕು? ನಮಗೆ ಹೇಗೆ ಗೊತ್ತಾಗಬೇಕು?

ಶ್ರೀ ಬಿ. ರಮಾನಾಥ ರೈ : ಒಟ್ಟಾರೆ ಅರಣ್ಯ ಪ್ರದೇಶದ ವಿಸ್ತೀರ್ಣ ಇಷ್ಟಿದೆ ಎಂದು ಲೆಕ್ಕಾಚಾರದಲ್ಲಿ ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು : ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಗ್ರಾಮದಲ್ಲಿ ಎಷ್ಟು ಅರಣ್ಯ ಸರ್ವೆ ನಂಬರ್ ಇವೆ, ವಿಸ್ತೀರ್ಣ ಇದೆ ಎಂಬ ಉತ್ತರ ಕೊಟ್ಟವರು ಸರಿಯಾಗಿ ಕೊಟ್ಟಿಲ್ಲ.

ಶ್ರೀ ಬಿ. ರಮಾನಾಥ ರೈ : ಕೊಟಿದ್ದೇವೆ ಮಾನ್ಯ ಅಧ್ಯಕ್ಷರೆ,

ಶ್ರೀ ಕೆ.ಎಂ. ಶಿವಲಿಂಗೇಗೌಡ : ಜಿಲ್ಲಾವಾರು ಮಾಹಿತಿ ಕೊಟ್ಟಿದ್ದೀರಿ, ಆದರೆ ಸರಿಯಾಗಿ ಕೊಟ್ಟಿಲ್ಲ.

ಶ್ರೀ ವೈ.ಎಸ್.ವಿ.ದತ್ತಾ : ಮಾನ್ಯ ಅಧ್ಯಕ್ಷರೆ, ಶಿವಲಿಂಗೇಗೌಡರು ಕೇಳುತ್ತಿರುವ ಪ್ರಶ್ನೆಯನ್ನು ಸಚಿವರು ಅರ್ಥ ಮಾಡಿಕೊಳ್ಳಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು ಸೇರಿ ಒಟ್ಟು ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣಕ್ಕಿಂತ ಒತ್ತುವರಿಯಾಗಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಹೆಚ್ಚಾಗಿದೆ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ರಮಾನಾಥ ರೈ : ಇಲ್ಲ. ನೀವು ವಕಾಲತ್ತು ಮಾಡುವಂತಹುದಲ್ಲ? ಇದಕ್ಕೆ ಸತ್ಯಾಂಶ ಬೇಕಲ್ಲ?

ಶ್ರೀ ವೈ.ಎಸ್.ವಿ.ದತ್ತಾ : ಅದಕ್ಕೇ ಮೀಸಲು ಅರಣ್ಯ ಪ್ರದೇಶದ ವಿಸ್ತೀರ್ಣ ಮತ್ತು ಒತ್ತುವರಿ ಅರಣ್ಯ ಪ್ರದೇಶದ ವಿಸ್ತೀರ್ಣ ಎರಡನ್ನೂ ಒಂದೇ ಯೂನಿಟ್‌ನಲ್ಲಿ ಕೊಡಿ. ಒಂದನ್ನು ಚದರ ಕಿ.ಮೀ ನಲ್ಲಿ ಕೊಟ್ಟು ಇನ್ನೊಂದನ್ನು ಎಕರೆಯಲ್ಲಿ ಹೇಳಿದರೆ ನಮಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ : ಆಯಿತು ಸರಿ ಪಡಿಸಿ ಉತ್ತರ ಕೊಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಅನುಬಂಧ ಕೊಟ್ಟಿದ್ದಾರೆ.

ಶ್ರೀ ವೈ. ಎನ್ ರುದ್ರೇಶ್ ಗೌಡ: Clarification ಇನ್ನೊಂದು ದಿನ writing ನಲ್ಲಿ ಕೊಡುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ : ಮೀಸಲು ಅರಣ್ಯ, ರಕ್ಷಿತ ಅರಣ್ಯ ಇವೆಲ್ಲವಕ್ಕೂ difference ಏನು ಎಂದು.

ಅಧ್ಯಕ್ಷರು : ಬೋಪಯ್ಯನವರೆ ನಾನು ಹೇಳುವವರೆಗೆ ಕೇಳಿ. ನಮ್ಮಲ್ಲಿ ಇದೆ.

ಶ್ರೀ ಬಿ. ರಮಾನಾಥ ರೈ : ಅನಾದಿ ಕಾಲದಿಂದ ಬಂದಿರುವುದು ಏನಿದೆ; ಮೀಸಲು ಅರಣ್ಯ ಎಂದರೆ ಮೀಸಲು ಅರಣ್ಯ, ರಕ್ಷಿತ ಅರಣ್ಯ ಎಂದರೆ ರಕ್ಷಿತ ಅರಣ್ಯ.

ಶ್ರೀ ಕೆ.ಜಿ. ಬೋಪಯ್ಯ: ನೀವು Forest Act ನನಗೆ ತೋರಿಸಿ ಬಿಡಿ. ನೀವು ಸುಮ್ಮನೆ ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಇಲ್ಲಿ ಹೇಳಿದರೆ ಹೇಗೆ?

ಅಧ್ಯಕ್ಷರು : ನಮ್ಮ land revenue record ನಲ್ಲಿ ಯಾವುದು reserve forest ಯಾವುದು ಮೀಸಲು ಅರಣ್ಯ ಎಂಬುದೆಲ್ಲಾ ಇದೆಯಲ್ಲ. ಇವರೇನು ಹೊಸದಾಗಿ ಮಾಡಿರುವುದೇನು?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅದು ಹೇಗೆ ಸರಿಯಾಗಿದೆ ಎಂದು ಹೇಳುತ್ತೀರಿ?

ಅಧ್ಯಕ್ಷರು: Private forest ಯಾವುದು ಗೊತ್ತಾ?

ಶ್ರೀ ಕೆ.ಜಿ. ಬೋಪಯ್ಯ: ನಾವೆಲ್ಲಾ ಇರುವುದೇ.

ಅಧ್ಯಕ್ಷರು: ಸೊಪ್ಪಿನ ಬೆಟ್ಟ, ಬಾಣೆ, ಕಾನು ಇವೆಲ್ಲವನ್ನು Private forest ಎಂದು ಹೇಳುವುದು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ : ಇವರಿಗೆ ಯಾರು ಅಧಿಕಾರ ಕೊಟ್ಟಿದ್ದು?

ಅಧ್ಯಕ್ಷರು: ಅದಕ್ಕಾಗಿ ನಾನು ಹೇಳುವುದು Demand ಇದೆಯಲ್ಲ, ಆ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ. you throw some light.

ಶ್ರೀ ಕೆ.ಜಿ. ಬೋಪಯ್ಯ : ನಮ್ಮ ಜಮ್ಮಾ, ಬಾಣೆ ಜಾಗದಲ್ಲಿ ತಿದ್ದುಪಡಿ ಮಾಡಿದ್ದೇವೆ. ಇವರು ಅದನ್ನು forest ಎಂದು ಹೇಳಿದರೆ ನಾವು ಕೇಳಿಕೊಂಡು ಕುಳಿತುಕೊಳ್ಳಬೇಕೇನು?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮೊದಲನೆಯದಾಗಿ, ನಾನು ಕೇಳಿರುವ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಎರಡನೆಯದಾಗಿ, ಎರಡನ್ನೂ ಎಕರೆವಾರು ಕೊಟ್ಟಿದ್ದರೆ ಮುಗಿದು ಹೊಗುತ್ತಿತ್ತು. ನಮಗೆ ಸ್ಪಷ್ಟವಾಗಲಿಲ್ಲ. ಇಷ್ಟೊಂದು ವಿಸ್ತೀರ್ಣದ ಮೀಸಲು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದ ಮೇಲೆ ಬಿಡುಗಡೆ ಮಾಡಿಸುವುದಕ್ಕೆ, ರೈತರಿಗೆ ಸುಮ್ಮನೆ ಮೀಸಲು ಅರಣ್ಯ ಎಂದು ಇಟ್ಟುಕೊಂಡು ದಿನವೂ ಅವರಿಗೆ ಕಷ್ಟ ಕೊಡುವ ಬದಲು once for all ಒಂದು Act ಅನ್ನು ಜಾರಿಗೆ ತರಬೇಕು. ಎಲ್ಲಾ ಕಡೆ ಈ ಸಮಸ್ಯೆ ಇದೆ. ಎಲ್ಲಾ ಊರುಗಳಲ್ಲಿ 100 ವರ್ಷ ತುಂಬಿ ತೆಂಗಿನ ಮರಗಳು ಬೀಳುತ್ತಿವೆ. ಆ ಪ್ರದೇಶವನ್ನು ಇದು ನಮ್ಮ ಮೀಸಲು ಅರಣ್ಯ ..

ಅಧ್ಯಕ್ಷರು : ಏನು ಮಾಡಬೇಕೆಂದು ಕೇಳಿರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಒಬ್ಬೊಬ್ಬರು Ranger ಬಂದ ತಕ್ಷಣ ಅವನಿಗೆ ಕಪ್ಪ ಕಾಣಿಕೆ ಕಟ್ಟಬೇಕು ಅವನು.

ಅಧ್ಯಕ್ಷರು: ಶಿವಲಿಂಗೇಗೌಡರೆ, ದಯಮಾಡಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಪ್ರಶ್ನೆ ಏನೆಂದರೆ, ಗ್ರಾಮೀಣ ಪ್ರದೇಶ ಮತ್ತು ಅರಣ್ಯ ಪ್ರದೇಶದಲ್ಲಿ ಮೀಸಲು ಅರಣ್ಯ ಪ್ರದೇಶ ಎಂದು ಇಟ್ಟುಕೊಂಡಿದ್ದೀರ. ಅಲ್ಲೆಲ್ಲ 100 ವರ್ಷದ ತೆಂಗಿನ ಮರಗಳಿವೆ.

ಶ್ರೀ ಬಿ. ರಮಾನಾಥ ರೈ : ಯಾರು ಇಟ್ಟುಕೊಂಡಿದ್ದಾರೆ? ಮೀಸಲು ಅರಣ್ಯ ಎಂದು ಮಾಡಿದವರ್ಯಾರು ? ಮೀಸಲು ಅರಣ್ಯ ಎಂದರೆ ಮೀಸಲು ಅರಣ್ಯ. ರಕ್ಷಿತ ಅರಣ್ಯ ಎಂದರೆ ರಕ್ಷಿತ ಅರಣ್ಯ. ಮೀಸಲು ಅರಣ್ಯ ಎಂದು ನಾವು ಇಂದು ಮಾಡಿದ್ದೇವೆ ಏನು?

ಶ್ರೀ ವೈ.ಎಸ್.ವಿ.ದತ್ತಾ : ಮಾನ್ಯ ಸಚಿವರೆ, ಶಿವಲಿಂಗೇಗೌಡರ ಪ್ರಶ್ನೆಯನ್ನು ನೀವು ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು: ದತ್ತಾ ನೀವು ಕುಳಿತುಕೊಳ್ಳಿ, ಗೌಡರೆ ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನನ್ನ ಪ್ರಶ್ನೆ ನೀವು ಈಗ ಗ್ರಾಮೀಣ ಪ್ರದೇಶದಲ್ಲಿ ಆ ಕಡೆ forest area ಬಗ್ಗೆ ನನಗೆ ಗೊತ್ತಿಲ್ಲ.

ಶ್ರೀ ಬಿ. ರಮಾನಾಥ ರೈ : ಏನು ಮಾಡಬೇಕೆಂದು ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮ ಕ್ಷೇತ್ರಗಳಲ್ಲಿ ಬಹಳಷ್ಟು ಜನ ರೈತರು ಪ್ರತಿ ಸಾರಿ ಭಯದ ವಾತಾವರಣದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಆ ಅರಣ್ಯ ಪ್ರದೇಶದ ಪಕ್ಕದಲ್ಲಿ ಜಮೀನುಗಳನ್ನು ಉತ್ತು, ಈಗಾಗಲೇ ತೆಂಗಿನ ಮರಗಳಲ್ಲಿ ಫಸಲು ಬಿಡುತ್ತಿವೆ. ಆ ಪ್ರದೇಶಕ್ಕೆ ಪ್ರತಿ ಬಾರಿ ನಿಮ್ಮ ಇಲಾಖೆಯವರು ಹೋಗಿ ದಾಳಿ ಮಾಡಿ ರೈತರನ್ನು ಬೆಳಿಗ್ಗೆ ಎದ್ದು ನೀವು ಖಾಲಿ ಮಾಡದಿದ್ದರೆ...

ಅಧ್ಯಕ್ಷರು : ಶಿವಲಿಂಗೇಗೌಡರೆ, ನೀವು ಕೇಳಿದ ಪ್ರಶ್ನೆಗೆ ಈ ಉಪ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಅದಕ್ಕಾಗಿ ಪ್ರತ್ಯೇಕ ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾನು ಅದಕ್ಕಾಗಿ ಎಲ್ಲಾ details ಕೊಡುತ್ತಾರೆ ಎಂದು ಪ್ರಶ್ನೆ ಕೇಳಿದೆ. ಯಾವ್ಯಾವುದು ಮೀಸಲು ಅರಣ್ಯ ಎಂಬುದನ್ನಾದರೂ ಘೋಷಣೆ ಮಾಡಿ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ಕೆಲಸ ಮಾಡಿ, ಚರ್ಚೆಗೆ ತೆಗೆದುಕೊಳ್ಳಿ, ಆಗ ವಿವರವಾಗಿ ಹೇಳಬಹುದು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : 200–300 ಜನ ರೈತರು..

ಅಧ್ಯಕ್ಷರು: ನೀವು ಪ್ರಶ್ನೆಯನ್ನೇ ಕೇಳಿಲ್ಲ. ಅವರು ಈಗ ಹೇಗೆ ಉತ್ತರ ಹೇಳುತ್ತಾರೆ?

ಶ್ರೀ ಬಿ. ರಮಾನಾಥ ರೈ : ಒಂದು ಕಡೆ ಪ್ರಾಣಿಗಳು ನಾಡಿಗೆ ಬರುತ್ತವೆಂದು ಹೇಳುತ್ತಾರೆ. ಮತ್ತೊಂದು ಕಡೆ ಅರಣ್ಯ ಪ್ರದೇಶದಲ್ಲಿ ಕುಳಿತವರಿಗೆ, ಕಾನೂನು ಪ್ರಕಾರ ನೋಡಿ. ಕಾನೂನು ತಿಳಿದ ಪ್ರತಿಯೊಬ್ಬರಿಗೂ ಗೊತ್ತಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಅವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಈಗ ಉಪ ಪ್ರಶ್ನೆಯನ್ನು ಅವರು ಕೇಳಿಲ್ಲ. ಉತ್ತರ ಹೇಳುವುದಕ್ಕೆ ಬೇರೆ ರೂಪದಲ್ಲಿ ಕೇಳಿದರೆ ಉತ್ತರ ಕೊಡುವುದಾಗಿ ಹೇಳಿ. ಈಗ ಶ್ರೀ ಸೋಮಶೇಖರ್ ರವರ ಪ್ರಶ್ನೆ.

ಜೆ.ಟಿ.ಓ ಗಳ ಹಾಗೂ ಕಾರಣೀಕೃತ ಅಧಿಕಾರಿಗಳ ವಿರುದ್ಧ ಜರುಗಿಸಿದ ಕ್ರಮ

15 (66) ಶ್ರೀ ಸೋಮಶೇಖರ್ ಎಂ.ಕೆ. (ಕೃಷ್ಣರಾಜ):– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2010ರ ಕೆ.ಪಿ.ಎಸ್.ಸಿ. ಮೂಲಕ ನಡೆದ 402 ಕಿ.ತ.ಅ. ಹುದ್ದೆ ನೇಮಕಾತಿಯಲ್ಲಿ ನಕಲಿ ಅನುಭವ ಪ್ರಮಾಣ ಪತ್ರ ಸಲ್ಲಿಸಿದವರಿಗೆ ಅಕ್ರಮವಾಗಿ ನೇಮಕಾತಿ ನೀಡಿರುವ ಹಗರಣದ ಕುರಿತು ಈಗಾಗಲೇ ಸಿ.ಐ.ಡಿ. ತನಿಖಾ ವರದಿ ಸಲ್ಲಿಕೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸಿ.ಐ.ಡಿ ತನಿಖಾ ವರದಿಯ ಪ್ರತಿಯನ್ನು ಒದಗಿಸುವುದು ;

(ಆ) 2010ರಲ್ಲಿ ನಕಲಿ ಅನುಭವ ಪ್ರಮಾಣ ಪತ್ರ ನೀಡಿ ಅಕ್ರಮವಾಗಿ ಸೇವೆಗೆ ಸೇರಿದ ಕಿ.ತ.ಅ.ಗಳ ಬಗ್ಗೆ ಈ ಮೊದಲು ಸದನದಲ್ಲಿ ಇಲಾಖೆಯಿಂದ ಪರಿಶೀಲಿಸಲ್ಪಟ್ಟಿರುವ ಕೆಲವು ಅಭ್ಯರ್ಥಿಗಳ ಪೈಕಿ 78 ಕಿ.ತ.ಅ ಗಳ ಅನುಭವ ಪ್ರಮಾಣ ಪತ್ರಗಳು ನಕಲಿಯೆಂದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ತಿಳಿಸಲಾಗಿತ್ತು. ಈ 78 ಕಿ.ತ.ಅ.ಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು ಒದಗಿಸುವುದು ; ಇಲ್ಲವಾದಲ್ಲಿ ಕಾರಣಗಳನ್ನು ನೀಡುವುದು ;

(ಇ) ಸಿ.ಐ.ಡಿ. ವರದಿಯ ಅನ್ವಯ ನಕಲಿ ಅನುಭವ ಪ್ರಮಾಣ ಪತ್ರ ನೀಡಿ ಅಕ್ರಮವಾಗಿ ಸೇವೆಗೆ ಸೇರಿದ ಕಿ.ತ.ಅ.ಗಳ ಹಾಗೂ ಕಾರಣೀಕೃತ ಅಧಿಕಾರಿಗಳ ವಿರುದ್ಧ ಜರುಗಿಸಿದ ಕ್ರಮದ ವಿವರಗಳನ್ನು ಒದಗಿಸುವುದು ; ಇಲ್ಲವಾದಲ್ಲಿ ಕಾರಣಗಳನ್ನು ನೀಡುವುದು?

ಶ್ರೀ ಪಿ.ಟಿ. ಪರಮೇಶ್ವರ್ ನಾಯ್ಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು) :–

(ಅ) ಬಂದಿದೆ. ತನಿಖಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಮೇಲ್ನೋಟಕ್ಕೆ ಕಂಡು ಬಂದಿರುವ 76 ಕಿರಿಯ ತರಬೇತಿ ಅಧಿಕಾರಿಗಳಿಗೆ ನೋಟೀಸ್ ಜಾರಿಮಾಡಲಾಗಿದೆ. ತದ ನಂತರ ಪ್ರಕರಣವನ್ನು ಸರ್ಕಾರವು ಸಿ.ಐ.ಡಿ. ಗೆ ವಹಿಸಿದ್ದು, ವರದಿಯು ಕಾರ್ಮಿಕ ಇಲಾಖೆಗೆ ಅಧಿಕೃತವಾಗಿ ದಿನಾಂಕ: 29.05.2014 ರಂದು ಸ್ವೀಕೃತವಾಗಿರುತ್ತದೆ.

(ಇ) ಸಿಐ.ಡಿ.ಯ ವರದಿಯು ಸರ್ಕಾರದ ಪರಿಶೀಲನೆ ಪೂರ್ಣಗೊಂಡ ಕೂಡಲೇ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.